# "ನೀನೇ ಧನ್ಯ!"

ಒಬ್ಬ ಗುರುವಿನ ಬಳಿ ಅನೇಕ ಶಿಷ್ಯಂದಿರಿದ್ದರು. ಒಂದು ದಿನ ಗುರು ತನ್ನ ಎಲ್ಲ ಶಿಷ್ಯರಿಗೂ ಭಗವತ್ ಸಾಕ್ಷಾತ್ಕಾರ ಪಡೆಯುವ ವಿಧಾನವನ್ನು ವಿವರಿಸುತ್ತ ಅವರೆಲ್ಲರಿಗೂ ಒಂದು ಮಂತ್ರವನ್ನು ಉಪದೇಶಿಸಿ "ಈ ಮಂತ್ರವನ್ನು ಹೆಚ್ಚು ಹೆಚ್ಚು ಜಪಿಸಿದಷ್ಟು ನಿಮಗೆ ಭಗವತ್ ಸಾಕ್ಷಾತ್ಕಾರವಾಗುವುದು" ಎಂದು ಹೇಳಿದನು.

ಭಗವಂತನ ಸಾಕ್ಷಾತ್ಕಾರವಾಗುವುದೆಂಬ ಆಸೆಯಿಂದ ಶಿಷ್ಯರು ಒಬ್ಬನಿಗಿಂತ ಮತ್ತೊಬ್ಬನು ಹೆಚ್ಚು ಸಲ ಮಂತ್ರವನ್ನು ಜಪಿಸಲು ಆರಂಭಿಸಿದರು.

ಒಂದಷ್ಟು ದಿನಗಳಾದ ಬಳಿಕ ಗುರುವು ತನ್ನ ಶಿಷ್ಯರನ್ನೆಲ್ಲ ಕರೆದು ಯಾರು ಯಾರು ಎಷ್ಟೆಷ್ಟು ಬಾರಿ ಮಂತ್ರ ಜಪ ಮಾಡಿದ್ದಾರೆಂದು ಕೇಳಿದನು. ಒಬ್ಬ ಶಿಷ್ಯ ನೂರೆಂಟು ಎಂದರೆ ಮತ್ತೊಬ್ಬ ಸಾವಿರದೆಂಟು ಬಾರಿ ಎಂದ. ಮಗದೊಬ್ಬ ಅದಕ್ಕೂ ಹೆಚ್ಚು ಎಂದ. ಇವರೆಲ್ಲರೂ ಹೀಗೆ ಹೇಳುತ್ತಿರಲು ಒಬ್ಬ ಶಿಷ್ಯ ಮಾತ್ರ ತನಗೆ ಒಂದು ಬಾರಿ ಕೂಡ ಮಂತ್ರಜಪ ಮಾಡಲು ಸಾಧ್ಯವಾಗಲಿಲ್ಲ ಎಂದು ಹೇಳಿದ. ಇದನ್ನು ಕೇಳಿದ ಎಲ್ಲ ಶಿಷ್ಯರು ಅವನನ್ನು ಪರಿಹಾಸ್ಯ ಮಾಡುತ್ತಾ ಘೊಳ್ಳೆಂದು ನಕ್ಕರು. ಆಗ ಗುರುವು ಅವನನ್ನು ಕುರಿತು, "ನೀನು ಏಕೆ ಮಂತ್ರ ಜಪ ಮಾಡಲಿಲ್ಲ?" ಎಂದು ಪ್ರಶ್ನಿಸಿದನು.

ಆಗ ಶಿಷ್ಯನು ಹೇಳಿದ "ನಾನು ಮಂತ್ರಜಪವನ್ನು ಮಾಡಲು ಪ್ರಾರಂಭಿಸುತ್ತಿದ್ದಂತೆಯೇ ಆ ಮಂತ್ರದ ಆರಾಧ್ಯಮೂರ್ತಿಯಲ್ಲಿ ನನ್ನ ಮನಸ್ಸು ಪೂರ್ತಿಯಾಗಿ ತಲ್ಲೀನವಾಗಿ ಮಂತ್ರ ಹೇಳುವುದೇ ಜ್ಞಾಪಕವಿರುತ್ತಿರಲಿಲ್ಲ, ಎಷ್ಟು ಬಾರಿ ಮಂತ್ರ ಹೇಳಬೇಕೆಂದು ಪ್ರಯತ್ನಿಸಿದರೂ ಪ್ರತಿ ಸಾರಿಯೂ ಹೀಗೇ ಆಗುತ್ತಿತ್ತು."

ಆಗ ಗುರುವು ತನ್ನ ಸ್ಥಾನದಿಂದೆದ್ದು ಆನಂದ ಬಾಷ್ಪಗಳನ್ನು ಸುರಿಸುತ್ತಾ ಶಿಷ್ಯನನ್ನು ಗಾಢವಾಗಿ ಆಲಂಗಿಸಿಕೊಂಡು "ನೀನೇ ಧನ್ಯ!" ಎಂದನು.

ಗುರುಗಳ ವಿಚಿತ್ರ ವರ್ತನೆಯನ್ನು ಕಂಡು ಚಕಿತರಾದ ಎಲ್ಲ ಶಿಷ್ಯರು ಗುರುಗಳನ್ನು ಕುರಿತು, "ಗುರುಗಳೇ ನಾವೆಲ್ಲ ಎಷ್ಟೆಷ್ಟೋ ಸಹಸ್ರ ಬಾರಿ ನೀವು ಕೊಟ್ಟಿರುವ ಮಂತ್ರ ಜಪವನ್ನು ಮಾಡಿದರೂ ತಾವು ಸಂತೋಷಪಡದೆ ಒಂದು ಬಾರಿಯೂ ಮಂತ್ರಜಪವನ್ನು ಮಾಡದ ಇವನನ್ನು ಶ್ಲಾಘಿಸುತ್ತಿದ್ದೀರಾ! ಇದು ನ್ಯಾಯವೇ?" ಎಂದು ಕೇಳಿದರು.

ಆಗ ಗುರುವು "ಮೂರ್ಖರೇ! ಮಂತ್ರಜಪವನ್ನು ಹೆಚ್ಚು ಬಾರಿ ಹೇಳುವ ಗುರಿ ಆ ಮಂತ್ರಜಪದ ಆರಾಧ್ಯದೈವದಲ್ಲಿ ತಲ್ಲೀನರಾಗುವುದೇ ಹೊರತು, ಎಷ್ಟು ಬಾರಿ ಹೇಳಿದೆವೆಂಬುದು ಮುಖ್ಯವಲ್ಲ. ಈ ಶಿಷ್ಯನು ಅವನು ಉಚ್ಚರಿಸಬೇಕು ಎನ್ನುವಾಗಲೇ ಅದರ ಆರಾಧ್ಯದೈವದಲ್ಲಿ ತಲ್ಲೀನನಾಗುವುದು ಅವನು ಸಾಧನೆಯಲ್ಲಿ ಮುಂದುವರೆದಿರುವುದಕ್ಕೆ ಸಾಕ್ಷಿ. ಅದಕ್ಕೇ ಅವನನ್ನು "ನೀನೇ ಧನ್ಯ" ಎಂದು ಆಲಂಗಿಸಿದೆ." ಎಂದನು.



ಕಥೆ :
ಡಾ || ವಿ.ಆರ್. ಪದ್ಮನಾಭರಾವ್